## ಕರ್ನಾಟಕ ಸರ್ಕಾರ

ಸಂಖ್ಯೆ: ಪಪೂಶಿಇ/ಇ-ಆಡಳಿತ/ಐಸಿಟಿ-2/2013-14

ನಿರ್ದೇಶಕರ ಕಛೇರಿ,
ಪದವಿ ಪೂರ್ವ ಶಿಕ್ಷಣ ಇಲಾಖೆ
18ನೇ ಅಡ್ಡ ರಸ್ತೆ, ಮಲ್ಲೇಶ್ವರಂ
ಬೆಂಗಳೂರು.
ದಿನಾಂಕ: 07-01-2015.

ರವರಿಗೆ,
ಉಪನಿರ್ದೇಶಕರು

ಪದವಿ ಪೂರ್ವ ಶಿಕ್ಷಣ ಇಲಾಖೆ

---------------ಜಿಲ್ಲೆ

ಮಾನ್ಯರೇ,

**ವಿಷಯ:-** ಐಸಿಟಿ ಫೇಸ್-II ಯೋಜನೆಯಡಿ ಎಜುಕಾಂ ಕಂಪನಿಯವರು ಬಾಕಿ ಉಳಿಸಿ ಕೊಂಡಿರುವ ವಿದ್ಯುಚ್ಛಕ್ತಿ/ಇಂಟರ್ ನೆಟ್ ಬಿಲ್‌ಗಳ ಪ್ರತಿ ಸಲ್ಲಿಕೆ ಕುರಿತು.

**ಉಲ್ಲೇಖ:-** ಪದವಿ ಪೂರ್ವ ಶಿಕ್ಷಣ ಇಲಾಖೆ/ಇ-ಆಡಳಿತ/ಐಸಿಟಿ-2/2013-14 ದಿನಾಂಕ 10.04.2014.

********

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಐಸಿಟಿ ಫೇಸ್-II ಯೋಜನೆಯಡಿ ಕರ್ನಾಟಕದ 708 ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿ ಪದವಿ ಪೂರ್ವ ವಿದ್ಯಾರ್ಥಿಗಳಿಗೆ ಗಣಕ ಶಿಕ್ಷಣ ನೀಡಲು ಮೆ: ಎಜುಕಾಂ ಸಂಸ್ಥೆಗೆ 2008-09 ರಿಂದ 2013-14 ರ ಏಪ್ರಿಲ್ 30ರವರೆವಿಗೆ ಐದು ವರ್ಷಗಳ ಅವಧಿಗೆ ಗುತ್ತಿಗೆ ನೀಡಲಾಗಿತ್ತು. ಸದರಿ ಯೋಜನೆಯ ಗುತ್ತಿಗೆ ಅವಧಿ ಏಪ್ರಿಲ್ 30, 2014ಕ್ಕೆ ಮುಗಿದಿರುವುದರಿಂದ ಸದರಿ ಕಂಪನಿಯವರಿಗೆ ಎಲ್ಲಾ 708 ಸರ್ಕಾರಿ ಪದವಿ ಪೂರ್ವ ಕಾಲೇಜುಗಳ ಹಾರ್ಡವೆರ್‌ಗಳನ್ನು ಸಂಬಂಧಿಸಿದ ಪ್ರಾಂಶುಪಾಲರಿಗೆ ಹಸ್ತಾಂತರ ಮಾಡಲು ಸೂಚಿಸಲಾಗಿತ್ತು. ಹಾರ್ಡವೇರ್ ಹಸ್ತಾಂತರ ಪಡೆದ ಪ್ರಾಂಶುಪಾಲರುಗಳು ಗುತ್ತಿಗೆ ಅವಧಿಯ ಮುಗಿಯುವವರೆಗೆ ಸದರಿ ಕಂಪನಿಯವರು ಉಳಿಸಿಕೊಂಡಿರುವ ವಿದ್ಯುತ್‌ಚ್ಛಕ್ತಿ ಇಂಟರ್‌ನೆಟ್, ಬಾಕಿ ಹಾಗೂ ದುರಸ್ತಿಯಾಗದ ಮತ್ತು ರೀಪ್ಲೇಸ್‌ಮೆಂಟ್ ಆಗದ ಹಾರ್ಡವೇರ್‌ಗಳ ಬಗ್ಗೆ ಉಪನಿರ್ದೇಶಕರಿಂದ ಧೃಡೀಕರಿಸಿ ವರದಿ ನೀಡಲು ಸೂಚಿಸಲಾಗಿತ್ತು.

.....2

ಈ ಸಂಬಂಧ ಪ್ರಾಂಶುಪಾಲರುಗಳು ನೀಡಿದ ಇಂಟರ್‌ನೆಟ್ ಮತ್ತು ವಿದ್ಯಾತ್‌ಚ್ಛಕ್ತಿ ಬಾಕಿ ವರದಿಯನ್ನು ಪರಿಶೀಲಿಸಲಾಗಿ, ಸದರಿ ಬಾಕಿಗಳ ಮೊತ್ತವನ್ನು ಮಾತ್ರ ನಮೂದಿಸಿ, ಧೃಡೀಕರಿಸಲಾಗಿದೆ. ಆದರೆ ಸದರಿ ಬಾಕಿಯು ಏಪ್ರೀಲ್ 30, 2014ಕ್ಕೆ ಅಂತ್ಯಗೊಳ್ಳುವಂತೆ ಯಾವ ದಿನಾಂಕದಿಂದ ಬಾಕಿ ಇದೆ ಎಂಬುದರ ಬಗ್ಗೆ ಮಾಹಿತಿ ನೀಡಿರುವುದಿಲ್ಲ.(ಈ ಅಂಶ 2013-14 ರ ಮಹಾಲೇಖಪಾಲಕರ ಲೆಕ್ಕ ಪರಿಶೋಧನೆಯಲ್ಲಿ ಕೂಡ ವ್ಯಕ್ತವಾಗಿರುತ್ತದೆ)

ಆದ್ದರಿಂದ ತಮ್ಮ ಜಿಲ್ಲಾ ವ್ಯಾಪ್ತಿಯ ಐಸಿಟಿ ಫೇಸ್ -II ಯೋಜನೆಯಡಿ ಜಾರಿಯಲ್ಲಿರುವ ಸರ್ಕಾರಿ ಪದವಿ ಪೂರ್ವ ಕಾಲೇಜುಗಳ ಪ್ರಾಂಶುಪಾಲರಿಗೆ ಸೂಚಿಸಿ, ತಮ್ಮ ತಮ್ಮ ಕಾಲೇಜುಗಳಲ್ಲಿ ದಿನಾಂಕ:30.04.2014ರ ವರೆಗೆ ಎಜುಕಾಂ ಕಂಪನಿ ಉಳಿಸಿ ಕೊಂಡಿರುವ ವಿದ್ಯುತ್/ಇಂಟರ್‌ನೆಟ್ ಬಿಲ್ ಪಾವತಿ ಮೊತ್ತ ಮತ್ತು (ಹಾಗೂ ಎಲ್ಲಿಂದ ಎಲ್ಲಿಯವರೆಗೆ ವಿವರ ಸಮೇತ) ಅದಕ್ಕೆ ಸಂಬಂದಿಸಿದ ಬಿಲ್ ವಿವರಗಳನ್ನು ನೀಡಲಾದ ಅನುಬಂಧದಲ್ಲಿ ನಮೂದಿಸಿ ಧೃಡೀಕರಿಸಿ ಜನವರಿ 31, 2015 ರೊಳಗಾಗಿ ಸಹಾಯಕ ನಿರ್ದೇಶಕರು, ಇ-ಆಡಳಿತ ಶಾಖೆ, ಪದವಿ ಪೂರ್ವ ಶಿಕ್ಷಣ ಇಲಾಖೆ, ಮಲ್ಲೇಶ್ವರಂ, ಬೆಂಗಳೂರು ರವರಿಗೆ ಕಳುಹಿಸುವುದು.

ಜಂಟಿ ನಿರ್ದೇಶಕರು (ಶೈಕ್ಷಣಿಕ),
ಪದವಿ ಪೂರ್ವ ಶಿಕ್ಷಣ ಇಲಾಖೆ.

ಐಸಿಟಿ ಫೇಸ್-II ಗಣಕಶಿಕ್ಷಣ ಯೋಜನೆಯಡಿ ಮೆ: ಎಜುಕಾಂ ಸಂಸ್ಥೆಯವರು ಬಾಕಿ ಉಳಿಸಿಕೊಂಡಿರುವ ವಿದ್ಯುತ್ ಬಿಲ್ /ಇಂಟರ್ ನೆಟ್ ಬಿಲ್ ವಿವರ

| ಕ್ರಸಂ | ಕಾಲೇಜಿನ ಹೆಸರು | ಬಾಕಿ ವಿವರ | ರಿಂದ | ರವರೆಗೆ | ಒಟ್ಟು ರೂ/- |
|---|---|---|---|---|---|
| | | ಇಂಟರ್ ನೆಟ್/ ಟೆಲಿಫೋನ್ ಬಿಲ್ | | ಏಪ್ರಿಲ್ 30 2014 | |
| | | ವಿದ್ಯುತ್ ಬಿಲ್ | | ಏಪ್ರಿಲ್ 30 2014 | |
| | ಒಟ್ಟು ಮೊತ್ತ | | | | |

ಉಪ ನಿರ್ದೇಶಕರ ಸಹಿ & ಮೊಹರು

ಪ್ರಾಚಾರ್ಯರ ಸಹಿ & ಮೊಹರು,